ಅನುಬಂಧ–2

ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ರಾಜ್ಯಕ್ಕೆ ವಿವಿಧ ಯೋಜನೆಯಡಿ ನೀಡಿದ ಅನುದಾನದ ವಿವರ ಈ ಕೆಳಕಂಡಂತಿದೆ:

ಕ್ರ.ಸಂ.	ಯೋಜನೆ	ಅನುದಾನ ರೂ. ಲಕ್ಷಗಳಲ್ಲಿ			ಷರಾ
		2010–11	2011–12	2012–13	
1	ಸಿ. ಆರ್. ಎಫ್.	5000.00	8300.00	12000.00	
2	ಅಂತರ್ ರಾಜ್ಯ	650.00	2900.00	1000.00	
3	ಆರ್ಥಿಕ ಪ್ರಾಮುಖ್ಯತೆ	1200.00	1600.00	1000.00	

ನಿಗದಿತ ಅವಧಿಯಲ್ಲಿ ಕಾಮಗಾರಿ ಅನುಷ್ಠಾನದಲ್ಲಿ ವಿಳಂಬ

945 (1789); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

(ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬೀದರ್ ಲೋಕೋಪಯೋಗಿ ವಿಭಾಗದಲ್ಲಿ ಯಾವ ಯಾವ ಗುತ್ತಿಗೆದಾರರು ವಹಿಸಿಕೊಂಡಿದ್ದ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿರುತ್ತಾರೆ; ಮತ್ತು ಯಾವ ಯಾವ ಗುತ್ತಿಗೆದಾರರು ನಿಗದಿತ ಅವಧಿ ನಂತರ ಕಾಮಗಾರಿ ಗಳನ್ನು ಅಪೂರ್ಣಗೊಳಿಸಿದ್ದಾರೆ; (ಇವರುಗಳ ಹೆಸರು, ಇವರ ಸಂಸ್ಥೆಯ ಹೆಸರು, ವಿವರಗಳ ಮಾಹಿತಿಯನ್ನು ಒದಗಿಸುವುದು)

(ಆ) ನಿಗದಿತ ಅವಧಿಯ ನಂತರವೂ ಕಾಮಗಾರಿಗಳನ್ನು ಪೂರ್ಣಗೊಳಿಸು ವುದಕ್ಕೆ ವಿಳಂಬ ಧೋರಣೆಯನ್ನು ಅನುಸರಿಸಿದಕ್ಕಾಗಿ ಯಾವ ಯಾವ ಗುತ್ತಿಗೆದಾರರನ್ನು ಸ್ವಂತ ವೆಚ್ಚದ ಮೇಲೆ ರಿಸ್ಕ್ ಅಂಡ್ ಕಾಸ್ಟ್ ಆಧಾರದ ಮೇಲೆ ರೀಸೆಂಟ್ ಮಾಡಲಾಗಿದೆ;

(ಇ) ಈ ಗುತ್ತಿಗೆದಾರರುಗಳ ಹೆಸರು, ವಿಳಾಸ ಮತ್ತು ವಿಳಂಬ ಮಾಡಿದ ಕಾಮಗಾರಿಗಳ ಪೂರ್ಣ ಮಾಹಿತಿಯ ವಿವರ ನೀಡುವುದು;

(ಈ) ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸದೇ ರಿಸ್ಕ್ ಆಂಡ್ ಕಾಸ್ಟ್ ಆಧಾರದ ಮೇಲೆ ರಿಸೆಂಡ್ ಮಾಡಿರುವ ಗುತ್ತಿಗೆದಾರರ ಮೇಲೆ ಕೈಗೊಂಡಿರುವ ಕ್ರಮಗಳೇನು? ಇವರುಗಳ ಮತ್ತೆ ಇಲಾಖೆಯಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ನಿಯಮಗಳ ಪ್ರಕಾರ ಅರ್ಹರಾಗಿರುತ್ತಾರೆಯೇ;

(ಉ) ಮೇಲ್ಕಂಡ ನಿಯಮಗಳ ಉಲ್ಲಂಘನೆಯ ಆಧಾರದ ಮೇಲೆ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿರುವ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದಿರುವ ಗುತ್ತಿಗೆದಾರರ ವಿವರಗಳು ಕೆಳಗಿನಂತಿವೆ:

ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿರುವ ಗುತ್ತಿಗೆದಾರರು		**ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದಿರುವ ಗುತ್ತಿಗೆದಾರರು**	
ಕ್ರ. ಸಂ.	**ಹೆಸರು**	**ಕ್ರ. ಸಂ.**	**ಹೆಸರು**
1	ಶ್ರೀ ಸೂರ್ಯಕಾಂತ ಅಲಮಾಜೆ	1	ಶ್ರೀ ಸುಭಾಷ ಜಲ್ದೆ ಭಾಲ್ಕಿ
2	ಶ್ರೀ ಬಸವರಾಜ ಎಸ್. ಕೋರಿ	2	ಶ್ರೀ ಜಗದೀಶ್ ಖೂಬಾ, ಬೀದರ
3	ಶ್ರೀ ಆರ್. ಜಿ. ಸಗರ	3	ಶ್ರೀ ಜಗದೀಶ್ ಸಿ. ಖಂಡ್ರೆ ಭಾಲ್ಕಿ
4	ಶ್ರೀ ಸುನೀಲ ಚಂದ್ರಭಾನ ಮಾನೆ	4	ಜೈ ಭವಾನಿ ಕನ್ಸಟಕ್ಷನ್ಸ್ ಭಾಲ್ಕಿ
5	ಶ್ರೀ ಗೋವಿಂದರಾವ ನಿರಗೂಡೆ	5	ಕೊಟರಕಿ ಕನ್ಸ್ಟ್ರಕ್ಷನ್ಸ್ ಪ್ರಾಲೀ. ಬೀದರ

6	ಶ್ರೀ ವೀರಶೆಟ್ಟಿ ಕೆ. ಬಿ.		
7	ಶ್ರೀ ನಾರಾಯಣ ಮೂಳೆ		
8	ಶ್ರೀ ಅಬ್ದುಲ್ ಶುಕೂರ		
9	ಶ್ರೀ ರಾಜಶೇಖರ ಪಾಟೀಲ ಅಷ್ಟೂರ		
10	ಶ್ರೀ ಬಿ. ಪ್ಹಿ. ಪಾಂಡೆ		
11	ಶ್ರೀ ಸಂತೋಷ ಗಿರಿ		
12	ಶ್ರೀ ಶಿವರಾಜ ಪೂಲೇಕರ		
13	ಶ್ರೀ ಶರಣಪ್ಪಾ ಪಂಚಾಕ್ಷರಿ		
14	ಶ್ರೀ ರವಿ ಬೆಟ್ಟೆ		
15	ಶ್ರೀ ಮಡವಳಯ್ಯಾ ಸ್ವಾಮಿ		
16	ಶ್ರೀ ಎನ್. ಅಶೋಕ		
17	ಶ್ರೀ ಮಲ್ಲಿಕಾರ್ಜುನ ದಾನಾ		
18	ಶ್ರೀ ಶಾಂತವೀರ ನಾಟಿಕಾರ		
19	ಶ್ರೀ ಸಂಜೀವಕುಮಾರ ಮುಂಡೆ		
20	ಶ್ರೀ ಕೃಷ್ಣಾ ಕುಲಕರ್ಣೀ		
21	ಶ್ರೀ ಅಶೋಕ ವಡಗೇರೆ		
22	ಶ್ರೀ ಗೋವಿಂದ ರಡ್ಡಿ		
23	ಶ್ರೀ ಶಂಕರ ಕೊಟರಕಿ		

24	ಶ್ರೀ ಗುರುನಾಥ ಕೊಳ್ಳೂರ		
25	ಶ್ರೀ ಜಗದೀಶ್ ಖೂಬಾ		
26	ಶ್ರೀ ಜಗದೀಶ್ ಸಿ. ಖಂಡ್ರೆ		
27	ಶ್ರೀ ಶಿವಾಜಿ ರಾಮಾ ಚವ್ಹಾಣ		
28	ಶ್ರೀ ಶಿವಕುಮಾರ ತಮಸಂಗೆ		
29	ಶ್ರೀ ಹಣಮಂತ ಖೂಬಾ		
30	ಶ್ರೀ ಬಾಬು ರೆಡ್ಡಿ		
31	ಶ್ರೀ ಅನೀಲಕುಮಾರ ರಾಠೋಡ		
32	ಶ್ರೀ ಎಸ್. ಬಲಬೀರಸಿಂಗ್		
33	ಶ್ರೀ ರಾಜಶೇಖರ ಜೀರಗೆ		

(ಆ) ನಿಗದಿತ ಅವಧಿಯ ನಂತರವೂ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ವಿಳಂಬ ಧೋರಣೆಯನ್ನು ಅನುಸರಿಸಿದ್ದಕ್ಕಾಗಿ ಟೆಂಡರ್ ನಿಯಮಾನುಸಾರ ರಿಸೆಂಟ್ ಮಾಡಲಾದ ಗುತ್ತಿಗೆದಾರರ ವಿವರಗಳು ಕೆಳಗಿನಂತಿವೆ:

1) ಶ್ರೀ ಸುಭಾಷ ಜಲ್ದೆ ಭಾಲ್ಕಿ.

2) ಶ್ರೀ ಜಗದೀಶ್ ಖೂಬಾ, ಬೀದರ

3) ಜಗದೀಶ ಸಿ. ಖಂಡ್ರೆ ಭಾಲ್ಕಿ

4) ಜೈ ಭವಾನಿ ಕನ್ಸ್ಟ್ರಕ್ಷನ್ಸ್ ಭಾಲ್ಕಿ

5) ಕೊಟರಕಿ ಕನ್ಸ್ಟ್ರಕ್ಷನ್ಸ್ ಪ್ರಾ.ಲೀ. ಬೀದರ

(ಇ) ಈ ಕುರಿತು ಕಾಮಗಾರಿಯ ಹೆಸರು ಹಾಗೂ ವಿಳಂಬ ಮಾಡಿದ ಗುತ್ತಿಗೆದಾರರ ವಿವರಗಳು ಕೆಳಗಿನಂತಿವೆ:

ಕ್ರ. ಸಂ.	ಕಾಮಗಾರಿ ಹೆಸರು	ಗುತ್ತಿಗೆದಾರರ ಹೆಸರು
1	ನಬಾರ್ಡ್ ಆರ್‌ಐಡಿಎಫ್–12 ರಡಿಯ ಭಾಲ್ಕಿ ತಾಲ್ಲೂಕಿನ ಬೀರಿ (ಬಿ) ದಿಂದ ನಿಟ್ಟೂರು ವಾಯಾ ನಾಗರಾಳ ರಸ್ತೆ ಸುಧಾರಣೆ	ಶ್ರೀ ಸುಭಾಷ ಜಲ್ದೆ ಗುತ್ತಿಗೆದಾರರು ಭಾಲ್ಕಿ
2	ನಬಾರ್ಡ್ ಆರ್‌ಐಡಿಎಫ್–17 ರಡಿಯ ಭಾಲ್ಕಿ ತಾಲ್ಲೂಕಿನ ನಿಟ್ಟೂರು (ಬಿ) ದಿಂದ ಹಜನಾಳ ರಸ್ತೆ ಸುಧಾರಣೆ	ಶ್ರೀ ಜಗದೀಶ್ ಖೂಬಾ, ಬೀದರ
3	5054 ಅಪೆಂಡಿಕ್ಸ್–ಇ ಅಡಿಯ ಭಾಲ್ಕಿ ತಾಲ್ಲೂಕಿನ ರಾಮತೀರ್ಥವಾಡಿ–ಚಿಕಲಚಂದಾ–ಮರೂರ ರಸ್ತೆ ಸುಧಾರಣೆ	ಶ್ರೀ ಜಗದೀಶ ಖಂಡ್ರೆ, ಭಾಲ್ಕಿ
4	5054 ಅಪೆಂಡಿಕ್ಸ್–ಇ ಅಡಿಯ ಭಾಲ್ಕಿ ತಾಲ್ಲೂಕಿನ ಹಲಬರ್ಗಾ–ಬಾವಗಿ ರಸ್ತೆ ಸುಧಾರಣೆ.	ಜೈ ಭವಾನಿ ಕನ್ಸ್‌ಟ್ರಕ್ಷನ್ಸ್, ಭಾಲ್ಕಿ
5	5054 ಅಪೆಂಡಿಕ್ಸ್–ಇ ಅಡಿಯ ಭಾಲ್ಕಿ ತಾಲ್ಲೂಕಿನ ಕೊಡಗಿಯಾಳ–ಜನವಾಡಾ ರಸ್ತೆ ಸುಧಾರಣೆ	ಕೊಟರಕಿ ಕನ್ಸ್‌ಟ್ರಕ್ಷನ್ ಬೀದರ

(ಈ) ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದೇ ಇರುವ ಗುತ್ತಿಗೆದಾರರ ಟೆಂಡರ್‌ನ್ನು ಸ್ಟಾಂಡರ್ಡ ಟೆಂಡರ್ ಡಾಕ್ಯೂಮೆಂಟ್‌ನ Section-5 Clause-49 2ರ ಪ್ರಕಾರ ಮೊಟಕುಗೊಳಿಸಿ, ನಂತರ ಸಂಬಂಧಿಸಿದ ಕಾರ್ಯನಿರ್ವಾಹಕ ಇಂಜಿನೀಯರವರು ಈ ಕುರಿತು

ಅದೇಶ ಹೊರಡಿಸಿ ಬಾಕಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಿ, Standard document ನ Clause-50.1 ರ ಪ್ರಕಾರ ಬಾಕಿ ಉಳಿದ ಕಾಮಗಾರಿಯ ಮೊತ್ತದ ವ್ಯತ್ಯಾಸವನ್ನು ತಾಳೆ ಹಾಕಿ ಶೇಕಡಾ 30 ರಷ್ಟು ಅಥವಾ ಪರ್ಯಾಯ ಗುತ್ತಿಗೆದಾರರಿಂದ ಕಾಮಗಾರಿ ಪೂರ್ಣಗೊಳಿಸಲು ಬೇಕಾಗುವ ವ್ಯತ್ಯಾಸದ ಹಣವನ್ನು ಮೂಲ ಗುತ್ತಿಗೆದಾರರಿಂದ ಭರಿಸಿಕೊಂಡು ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ನಿಗದಿತ ಅವಧಿಯಲ್ಲಿ ಹಾಗೂ ಅನುಮೋದಿತ ಹೆಚ್ಚಿನ ಅವಧಿಯಲ್ಲಿಯೂ ಸಹ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲರಾದ ಗುತ್ತಿಗೆ ದಾರರ ಗುತ್ತಿಗೆಯನ್ನು Standard Tender Document Clause-42.2 ರ ಪ್ರಕಾರ ಮೊಟಕುಗೊಳಿಸಲಾಗುವುದು ಹಾಗೂ ಇವರ ಹಿಂದಿನ ವರ್ಷಗಳ ಕಾರ್ಯನಿರ್ವಹಣೆಯ ಕ್ಷಮತೆಯನ್ನು ಪರಿಗಣಿಸಿ ಇವರು poor performer ಎಂದು ಕಂಡಬಂದಲ್ಲಿ ಮುಂದಿನ 1 ಅಥವಾ 2 ವರ್ಷದ ಅವಧಿಗೆ ಯಾವುದೇ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸದಂತೆ ಕ್ರಮ ಜರುಗಿಸಲಾಗುವುದು.

(ಊ) ಮೇಲ್ಕಂಡ 5 ಜನ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆ ಬೀದರ ಜಿಲ್ಲೆಯಲ್ಲಿ ತಲಾ ಒಂದೊಂದು ಕಾಮಗಾರಿಯನ್ನು ಟೆಂಡರ್ ನಿಯಮಾವಳಿ ಪ್ರಕಾರ ನಿರ್ವಹಿಸುವಲ್ಲಿ ವಿಫಲರಾಗಿದ್ದು, ಇವರುಗಳನ್ನು **"ಕಪ್ಪು ಪಟ್ಟಿಗೆ"** ಸೇರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿ, ನಿಯಮಗಳನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

ವನಮಾರಪಳ್ಳಿ ರಾಯಚೂರು ರಸ್ತೆ ಅಭಿವೃದ್ಧಿ

946 (1790); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

(ಅ) ಬೀದರ್ ತಾಲ್ಲೂಕಿನ ವನಮಾರಪಳ್ಳಿ ರಾಯಚೂರು 15 ಕಿಲೋ ಮೀಟರ್ (32.00ಕಿ.ಮೀ. ರಿಂದ 47.00 ವರೆವಿಗೆ) ರಾಜ್ಯ ಹೆದ್ದಾರಿಯ ಕಾಮಗಾರಿಯನ್ನು ಇ–ಟೆಂಡರ್ ಮೂಲಕ ವಹಿಸಿಕೊಂಡಿದ್ದ ಗುತ್ತಿಗೆದಾರರ ಹೆಸರು ವಿವರಗಳೇನು;